# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಕೆ. ಹರೀಶ್ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1172 |
| ಉತ್ತರಿಸಬೇಕಾದ ದಿನಾಂಕ | : | 28.12.2022 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಸಚಿವರು. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕಳೆದ ಎರಡು ಮೂರು ತಿಂಗಳಿನಿಂದ ರಾಜ್ಯದಲ್ಲಿ ಜಾನುವಾರುಗಳಿಗೆ ಕಾಡುತ್ತಿರುವ ಚರ್ಮಗಂಟು ರೋಗ ನಿವಾರಣೆ ಮಾಡುವ ಸಂಬಂಧ ಸರ್ಕಾರ ಸಮಿತಿಯನ್ನು ರಚಿಸಿದೆಯೇ; | ರಾಜ್ಯದಲ್ಲಿ ಜಾನುವಾರುಗಳಿಗೆ ಕಾಡುತ್ತಿರುವ ಚರ್ಮಗಂಟು ರೋಗ ನಿವಾರಣೆ ಮಾಡುವ ಸಂಬಂಧ ವಿಜ್ಞಾನಿಗಳ ಸಮಿತಿಯೊಂದನ್ನು ರಚಿಸಲಾಗಿರುತ್ತದೆ. |
| ಆ | ಸಮಿತಿ ನೀಡಿರುವ ವರದಿ ಏನು; ವರದಿ ಪ್ರಕಾರ ಏನು ಕ್ರಮ ಕೈಗೊಳ್ಳಲಾಗಿದೆ; | ಸಮಿತಿಯು ನೀಡಿರುವ ವರದಿಯನ್ನು ಲಗತ್ತಿಸಿದೆ. ವರದಿಯಲ್ಲಿ ಸೂಚಿಸಿರುವಂತೆ ಎಲ್ಲಾ ಜಾನುವಾರುಗಳಿಗೆ (ಹಸು ಮತ್ತು ಎಮ್ಮೆ) ಲಸಿಕೆ ಹಾಕುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ರೋಗಕ್ಕೆ ತುತ್ತಾದ ಜಾನುವಾರುಗಳಿಗೆ ಚಿಕಿತ್ಸೆಯನ್ನು ಮಾರ್ಗಸೂಚಿಯಂತೆ ಮುಂದುವರೆಸಲು ಕ್ರಮ ಕೈಗೊಳ್ಳಲಾಗಿದೆ. ರೋಗ ಪ್ರಸರಣಕ್ಕೆ ಕಾರಣವಾದ ಸೊಳ್ಳೆ, ಉಣ್ಣೆ ಮತ್ತು ನೊಣಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗಿದೆ. |
| ಇ | ಚರ್ಮಗಂಟು ರೋಗ ಕಂಡುಬಂದ ಜಿಲ್ಲೆಗಳಲ್ಲಿ ವಿಮಾ ಸೌಲಭ್ಯಗಳನ್ನು ಜಾರಿಗೆ ತರಲಾಗಿದೆಯೇ ಹಾಗೂ ಪರಿಹಾರಗಳನ್ನು ಘೋಷಣೆ ಮಾಡಲಾಗಿದೆಯೇ; | ಚರ್ಮಗಂಟು ರೋಗದಿಂದ ಮರಣ ಹೊಂದಿರುವ ಆಕಳು/ಕರು ಮತ್ತು ಎತ್ತುಗಳಿಗೆ ಸರ್ಕಾರದಿಂದ ಕರುಗಳಿಗೆ ರಾಜ್ಯಾದ್ಯಂತ ಮೃತಪಟ್ಟ ಜಾನುವಾರು ಮಾಲೀಕರಿಗೆ ಸರ್ಕಾರವು ಪ್ರತಿ ಕರುವಿಗೆ ರೂ.5,000/-, ಹಸು ಒಂದಕ್ಕೆ ರೂ.20,000/- ಹಾಗೂ ಪ್ರತಿ ಎತ್ತಿಗೆ ರೂ.30,000/-ದಂತೆ ಪರಿಹಾರವನ್ನು ಘೋಷಿಸಿರುತ್ತದೆ. ಒಟ್ಟು ರೂ.37.00 ಕೋಟಿ ಪರಿಹಾರ ಧನ ಬಿಡುಗಡೆಯಾಗಿದ್ದು, ರೂ.22.52 ಕೋಟಿ ಪರಿಹಾರ ಧನವನ್ನು ಜಾನುವಾರು ಮಾಲೀಕರಿಗೆ ವಿತರಿಸಲಾಗಿದೆ. ಬಾಕಿ ಪರಿಹಾರ ಧನದ ವಿತರಣಾ ಕಾರ್ಯ ಪ್ರಗತಿಯಲ್ಲಿದೆ. |
| ಈ | ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಚರ್ಮಗಂಟು ರೋಗ ಪತ್ತೆಯಾದ ಪ್ರಕರಣಗಳ ಸಂಖ್ಯೆ, ನೀಡಲಾದ ಪರಿಹಾರ ಮತ್ತು ಕ್ರಮಗಳೇನು? (ಮಾಹಿತಿ ಒದಗಿಸುವುದು) | ದಿನಾಂಕ:23-12-2022 ರವರೆಗೆ ದಕ್ಷಿಣ ಕನ್ನಡ ಜಿಲ್ಲೆಯ 2785 ಜಾನುವಾರುಗಳಲ್ಲಿ ರೋಗ ಪತ್ತೆಯಾಗಿದ್ದು, 45 ಜಾನುವಾರುಗಳು ಮರಣ ಹೊಂದಿರುತ್ತವೆ. ಈಗಾಗಲೇ 07 ಜಾನುವಾರುಗಳ ಮಾಲೀಕರಿಗೆ ಒಟ್ಟು ರೂ.1.40 ಲಕ್ಷಗಳ ಪರಿಹಾರಧನವನ್ನು ವಿತರಿಸಲಾಗಿರುತ್ತದೆ.<br><br>ರೋಗ ನಿಯಂತ್ರಣಕ್ಕಾಗಿ ಜಿಲ್ಲೆಯಲ್ಲಿ ಈಗಾಗಲೇ 158395 ಜಾನುವಾರುಗಳಿಗೆ ರೋಗನಿರೋಧಕ ಲಸಿಕೆಯನ್ನು ಹಾಕಲಾಗಿರುತ್ತದೆ. |

ಇ-ಪಸಂಮೀ 311 ಸಲೆವಿ 2022

ಪ್ರಭು ಬಿ. ಚವ್ಹಾಣ್
ಪಶುಸಂಗೋಪನೆ ಸಚಿವರು